ಡಿಮ್ಯಾಂಡ್ ಎಲ್ಲಿ ಹೋಗುತ್ತದೆಯೋ ಅದು ಚರ್ಚೆಯಾಗುವುದಿಲ್ಲವೆಂದು ನನಗೆ ಕಾಣುತ್ತಿದೆ. ಈ ಲಕ್ಷಣ ನೋಡಿದರೆ ಟೈಮ್ ಬಹಳ ಕಡಿಮೆ ಇದೆ. ಬಹಳ ಸವಿಸ್ತಾರವಾಗಿ ಇದರ ಬಗ್ಗೆ ಚರ್ಚೆಯಾಗುವಂಥ ಸಾಧ್ಯತೆ ಕಾಣುತ್ತಿಲ್ಲ. ಡಿಮ್ಯಾಂಡ್ ಕೊಟ್ಟಂತಹ 43-44 ಮತ್ತು ನೀರಾವರಿ ಮೇಲೆ ಅದಕ್ಕಾಗಿ ಇದನ್ನು ಇವತ್ತೆ ತಕ್ಷಣ ತೆಗೆದುಕೊಂಡರೆ ನನದೇನು ಅಭ್ಯಂತರ ಇಲ್ಲ. ನಾವು ಕೂಡ ಭಾಗವಹಿಸುತ್ತೇವೆ. ಮತ್ತು ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಕೂಡ ನಾವು ಪ್ರಸ್ತಾಪವನ್ನು ಮಾಡುತ್ತೇವೆ. ನಿಗಮದಲ್ಲಿ ಅವರು ಕೂಡಿಸಿದಂತಹ ಹಣದ ಬಗ್ಗೆ ಮತ್ತು ಕೆಲಸದ ಬಗ್ಗೆ ನಾವು ಪ್ರಸ್ತಾಪ ಮಾಡುತ್ತೇವೆ.

ಅಧ್ಯಕ್ಷರು : ನಿನ್ನೆಯ ದಿವಸ ಶೂನ್ಯವೇಳೆಯಲ್ಲಿ ಶ್ರೀಮಾನ್ ನಂಜೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾ ಒಂದು ಹಂತದಲ್ಲಿ ಈ ಸದನದ ಸದಸ್ಯರಲ್ಲದೇ ಇರತಕ್ಕಂಥವರ ಹೆಸರನ್ನು ಪ್ರಸ್ತಾಪ ಮಾಡಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರು ಹೇಗೆ ಕೊಟ್ಟರು, ಹೇಗೆ ಮಾಡಿದರು ಎನ್ನುವುದನ್ನು ಸಾಬೀತು ಮಾಡುವುದಕ್ಕೆ ಸಿ.ಬಿ.ಐ. ತನಿಖೆಗೆ ಪ್ರಾರ್ಥನೆಯನ್ನು ಮಾಡಿದ್ದುದು, ಮಾನ್ಯ ಮುನಿಯಪ್ಪನವರೆ ಜಯಲಲಿತ ಅವರಿಗೆ ಹೇಳಿ ಸಿ.ಬಿ.ಐ. ತನಿಖೆಗೆ ಏರ್ಪಡಿಸಿಯಮ್ಮ, ಆಗ ನಾವು ಪ್ರೂವ್ ಮಾಡುತ್ತೇವೆಂದು ಕೆಲವು ಮಾತನ್ನು ಹೇಳಿದರು ಈ ಮಾತನ್ನು ಸಕಾಲದಲ್ಲಿ ನಾನು ಆದೇಶವನ್ನು ಕೊಟ್ಟು ತೆಗೆಯಿಸಬೇಕಾಗಿತ್ತು, ಆದರೆ ನಾನು ಮಾಡಲಿಕ್ಕೆ ಆಗಲಿಲ್ಲ. ಇದೆಲ್ಲ ಇವತ್ತು ಪತ್ರಿಕೆಗಳಲ್ಲಿ ಪ್ರಕಟಣೆಯೂ ಆಯಿತು. ಇದರಿಂದ ನಾನು ಬಹಳ ನೊಂದಿದ್ದೇನೆ. ನಮ್ಮ ಪತ್ರಿಕಾ ವರದಿಗಾರರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ತಿದ್ದುಪಡಿಯನ್ನು ಪ್ರಕಟಣೆ ಮಾಡಬೇಕೆಂದು, ಹಾಗೆಯೇ ಮುಂದುವರೆದು ಮಾನ್ಯ ಸದಸ್ಯರಾದ ಶ್ರೀ ಮುನಿಯಪ್ಪನವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅದೂ ಕೂಡ ಪ್ರಕಟವಾಗಿ ಬಿಟ್ಟಿದೆ. ಮೀನು ಮಾರುಕಟ್ಟೆಯಲ್ಲಿರಬೇಕಾದವರು. ಶಾಸಕರಾಗಿ ಬಂದಿದ್ದಾರೆ. ಇವರು ಎಲ್ಲೋ ಮೀನು ಹಿಡಿಯುತ್ತಿದ್ದವರು ಶಾಸಕರಾಗಿ ಬಂದಿದ್ದಾರೆ ಎನ್ನತಕ್ಕಂತಹ ಮಾತುಗಳೂ ಸಹ ಪತ್ರಿಕೆಗಳಲ್ಲಿ ಬಂದಿದೆ. ನಾನು ಆಗಲೇ ಹೇಳಿದೆ. ಆವೇಶ ಭರದಲ್ಲಿ ಆಡಿರತಕ್ಕಂತಹ ಮಾತುಗಳನ್ನು ಎಲ್ಲ ಕಡತದಿಂದ ತೆಗೆಸುತ್ತೇನೆಂದು ನಿನ್ನೇ ಈ ಕೆಲಸವನ್ನು ಮಾಡಿದ್ದರೆ ಇದು ಸಕಾಲಿಕ ಆಗುತ್ತಿತ್ತು. ನಾನು ಸ್ವಲ್ಪ ಎಚ್ಚರ ತಪ್ಪಿದ್ದರಿಂದ ಈ ಅನಾಹುತವಾಯಿತು. ಆದ್ದರಿಂದ ತೀವ್ರ ವಿಷಾದವನ್ನು ವ್ಯಕ್ತಮಾಡಿ, ಪತ್ರಿಕಾ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿಯನ್ನು ಹೊರಡಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನೆನ್ನೆ ತಾವು ಒಂದು ರೂಲಿಂಗ್‌ನ್ನು ನೀಡಿದ್ದೀರಿ ಇದನ್ನು ತಾವು ಪುನರ್ ಪರಿಶೀಲನೆಯನ್ನು ಮಾಡಬೇಕೆಂದು ನನ್ನ ಅನಿಸಿಕೆ ಏಕೆಂದರೆ ಇವತ್ತು ಡೆಕ್ಕನ್ ಹೆರಾಲ್ಡ್‌ನಲ್ಲಿ ನೋಡಿದೆ. ಮತ್ತು ಪಾರ್ಲಿಮೆಂಟರಿ ಪ್ರೊಸಿಜರ್ಸ್‌ನೆಲ್ಲ ಇದರ ಬಗ್ಗೆ ತಮ್ಮ ಗಮನಕ್ಕೆ.....

ಅಧ್ಯಕ್ಷರು : ಈಗ ಒಂದು ಕೆಲಸವನ್ನು ಮಾಡೋಣ. I am going strictly according to the business. you can convince me about it.

ಗಮನ ಸೆಳೆಯುವ ಸೂಚನೆ

(1) ಕೈಗಾದಿಂದ ಶರಸಿಯವರೆಗೆ ವಿದ್ಯುತ್ ಲೈನ್ ಹಾಕುವ ಕಾಮಗಾರಿಯನ್ನು ನಿಲ್ಲಿಸುವ ಬಗ್ಗೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನೀಡಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ .ಕೆ : ಉತ್ತರ ಕನ್ನಡ ಕಾರವಾರದ ಹತ್ತಿರ ಕೈಗಾ ಅಣುಸ್ಥಾವರದ- ಗುಮ್ಮಟ 13ನೇ ಮೇ 1994ರಂದು ಕುಸಿದು ಬಿತ್ತು. ಆ ಸಮಯದಲ್ಲಿ ಎರಡು ಪ್ರತ್ಯೇಕವಾದಂತಹ ತಜ್ಞರ ಸಮಿತಿಯನ್ನು ರಚಿಸಿ, ಗುಮ್ಮಟ ಕುಸಿತದ ಕಾರಣಗಳನ್ನು ಗುರುತಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮುಂದಾದವು ಈ ತಜ್ಞರ ಸಮಿತಿಯ ವರದಿ ಸರ್ಕಾರಕ್ಕೆ .ಸಲ್ಲಿಸುವ ಮುನ್ನವೇ ಕೈಗಾದಿಂದ ಶಿರಸಿಯವರೆಗೆ ಅರಣ್ಯವನ್ನು ಕಡಿದು ವಿದ್ಯುತ್ ಲೈನ್‌ನ್ನು ಹಾಕುವ ಕೆಲಸವನ್ನು ಪ್ರಾರಂಭಿಸಿರುವುದನ್ನು ತಕ್ಷಣ ನಿಲ್ಲಿಸುವ ಅಗತ್ಯವಿದೆ. ಈ ಹಿನ್ನಲೆಯಲ್ಲಿ ಜಿಲ್ಲೆಯ ಜನತೆಯಲ್ಲಿ ತೀವ್ರ ಅಸಮಾಧಾನ ಉಂಟಾಗಿ ಹೋರಾಟದ ಹೆಜ್ಜೆಯನ್ನು ತುಳಿಯುತ್ತಿದ್ದಾರೆ. ಹಾಗಾಗಿ ರಾಜ್ಯ ಸರ್ಕಾರ ತಕ್ಷಣ ವಿದ್ಯುತ್ ಲೈನ್‌ನ್ನು ಹಾಕುವ ಕೆಲಸವನ್ನು ಸ್ಥಗಿತಗೊಳಿಸಿ ಕೈಗಾ ಗುಮ್ಮಟ ಕುಸಿತದ ತಜ್ಞರ ವರದಿಯನ್ನು ತಕ್ಷಣ ತರಿಸಿಕೊಂಡು ಬಹಿರಂಗ ಪಡಿಸಲು ಈ ಮೂಲಕ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಉತ್ತರ ಕನ್ನಡ ಜಿಲ್ಲೆಯ ಕಾರಾವಾರದ ಹತ್ತಿರ ಕೈಗಾ ಅಣುಸ್ಥಾವರದ ಡೂಂ 13ನ ಮೇ 1994ರಂದು ಕುಸಿದು ಬಿದ್ದಿರುತ್ತದೆ. ಈ ಸ್ಥಾವರವನ್ನು ಕೇಂದ್ರ ಸರ್ಕಾರವು ಸ್ಥಾಪಿಸುತ್ತಿರುತ್ತದೆ. ಈ ಸಂಬಂಧದಲ್ಲಿ ನ್ಯೂಕ್ಲೀಯರ್ ಪವರ್ ಕಾರ್ಪೊರೇಷನ್ ಒಂದು ಸಮಿತಿಯನ್ನು ರಚಿಸಿರುತ್ತದೆ. ಇದಲ್ಲದೇ ಅಟಾಮಿಕ್ ಎನರ್ಜಿ, ರೆಗ್ಯೂಲೇಟರ್ ಬೋರ್ಡ್ ಸಹ ಈ ಬಗ್ಗೆ ತನಿಖೆ ಮಾಡಲು ಒಂದು ಸಮಿತಿಯನ್ನು ನೇಮಿಸಿತ್ತು ಸದರಿ ಸಮಿತಿಗಳ ವರದಿಗಳು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿ ಇದೆ ಎಂದು ತಿಳಿದುಬಂದಿರುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದ ಅಂತಿಮ ನಿರ್ಧಾರವನ್ನು ಕಾಯಲಾಗುತ್ತದೆ.

ಅಣು ವಿದ್ಯುತ್ ಸ್ಥಾವರದಿಂದ ಉತ್ಪಾದಿತವಾಗುವ ವಿದ್ಯುತ್‌ನ್ನು ಪ್ರಸರಣೆ ಮಾಡಲು 400ಕೆ.ವಿ. ವಿದ್ಯುತ್ ಲೈನ್‌ನನ್ನು ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಇನ್ನೊಂದು ಸಂಸ್ಥೆಯಾದ ಪವರ್ ಗ್ರಿಡ್ ಕಾರ್ಪೋರೇಷನ್ ಸಂಸ್ಥೆಯ ನಿರ್ಮಾಣ ಮಾಡುತ್ತಿದೆ. ಇದರ ನಿರ್ಮಾಣವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಮಾಡುತ್ತಿಲ್ಲ.

ಈಗಲ್ಲದಿದ್ದರೂ, ಮುಂದೆಯಾದರೂ, ಕೈಗಾ ಅಣು ವಿದ್ಯುತ್. ಸ್ಥಾವರದಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಪ್ರಸರಣೆ ಮಾಡಲು ಕೈಗಾ - ಶಿರಸಿ 400 ಕೆವಿ ವಿದ್ಯುತ್ ಲೈನಿನ ಅಗತ್ಯವಿದೆ. ಅಲ್ಲದೆ. ಕದ್ರ ಮತ್ತು ಕೊಡಸಳ್ಳಿಗಳಲ್ಲಿ ನಿರ್ಮಾಣವಾಗುತ್ತಿರುವ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಉತ್ಪಾದನೆಗೊಳ್ಳುವ ವಿದ್ಯುತ್‌ನ್ನು ಪ್ರಸರಣೆ ಮಾಡಲೂ ಸಹ ಸದರಿ ವಿದ್ಯುತ್ ಲೈನಿನ ಅವಶ್ಯಕತೆ ಇದೆ. ಆದ್ದರಿಂದ ಈ ವಿದ್ಯುತ್ ಲೈನಿನ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸುವುದು ರಾಜ್ಯದ ಹಿತದೃಷ್ಟಿಯಿಂದ ಅಷ್ಟು ಸಮಂಜಸವಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ .ಕೆ : ಮಾನ್ಯ ಅಧ್ಯಕ್ಷರೇ, ವಿದ್ಯುತ್ ಮಂತ್ರಿಗಳು ಇದು ರಾಜ್ಯದ ಹಿತದೃಷ್ಟಿಯಿಂದ ಅಷ್ಟು ಸಮಂಜಸವಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಅಣ್ಣುಸ್ಥಾವರ ಗುಮ್ಮಟ ಕುಸಿತದ ಬಗ್ಗೆ ಅಣು ವಿದ್ಯುತ್ ನಿಗಮ ಮತ್ತು ಅಣು ವಿದ್ಯುತ್ ನಿಯಂತ್ರಣ ಮಂಡಲಿಗಳು ಕೊಟ್ಟಿರತಕ್ಕಂತಹ ವರದಿಗಳು ಕೇಂದ್ರದ ಪರಿಶೀಲನೆಯಲ್ಲಿರುವಾಗ ಈ ಕೆಲಸವನ್ನು ಮುಂದುವರೆಸುವುದು ಅಷ್ಟು ಸೂಕ್ತವಾಗುವುದಿಲ್ಲವೆಂದು. ಏಕೆಂದರೆ ಆ ವರದಿ ಯಾವ ರೀತಿಯಲ್ಲಿ ಬರುತ್ತದೆಂದು ನಮಗೆ ಗೊತ್ತಿಲ್ಲ. ಆದ್ದರಿಂದ ಈ ವರದಿಯನ್ನು ಸಂಪೂರ್ಣವಾಗಿ ನೋಡಿ, ಅದರ ಸಂಪೂರ್ಣ ಪರಿಶೀಲನೆಯಾದ ನಂತರ ಸರ್ಕಾರಕ್ಕೆ ಈ ಕಾಮಗಾರಿಗಳನ್ನು

ಮುಂದುವರೆಸಲಿಕ್ಕೆ ತೊಂದರೆಯಾಗಿರುವುದು ಏನು? ಅಲ್ಲಿ ಅರಣ್ಯ ನಾಶವನ್ನು ಮಾಡಿ ವಿದ್ಯುತ್ ಲೈನ್‌ನ್ನು ಹಾಕುವುದೇ ಸರ್ಕಾರದ ಮುಖ್ಯ ಉದ್ದೇಶವಾಗಿದೆಯಾ ಅಥವಾ ವರದಿಯನ್ನು ಪರಿಶೀಲಿಸಿ ಅದರಂತೆ ಕ್ರಮ ತೆಗೆದುಕೊಳ್ಳುವುದು ಮುಖ್ಯವಾಗಿದೆಯೋ? ಇದು ಬಹಳ ಮುಖ್ಯವಿದೆ. ಗುಮ್ಮಟ ಕುಸಿತದ ನಂತರ ಅನೇಕ ತಜ್ಞರು ಹೇಳಿದರು ಏಕೆಂದರೆ ಇದರಲ್ಲಿ ಅಣು ವಿದ್ಯುತ್ ಆಯೋಗದ ಅಧ್ಯಕ್ಷರಾದ ಚಿಂದಂಬರ್‌ರವರು ಕೈಗಾ ಅಣು ವಿದ್ಯುತ್ ಸ್ಥಾವರವನ್ನು ಕೈ ಬಿಡಬೇಕಾದಂತಹ ಹಂತದಲ್ಲಿದ್ದೇವೆಂದು ಹೇಳಿದರು. ಅಂದರೆ ಪ್ರತಿಯೊಂದು ಸಂದರ್ಭದಲ್ಲಿ ಈ ಕೈಗಾ ಅಣು ವಿದ್ಯುತ್ ಸ್ಥಾವರವನ್ನು ನಿಲ್ಲಿಸಬೇಕಾದಂತಹ ಒಂದು ಅಗತ್ಯತೆ ಇದೆ ಎಂದು ಪ್ರತಿಯೊಬ್ಬರು ಅನೇಕರು ಹೇಳುತ್ತಿದ್ದಾರೆ. ಆ ಸಂದರ್ಭದಲ್ಲಿ ತಜ್ಞರ ವರದಿ ಬಂದ ಹೊರತು ಈಗ ಲೈನ್ ಹಾಕುವುದಕ್ಕೆ ಅವ್ಯತೆ ಏಕೆ? ಮರ ಕಡಿಯುವುದೇ ಹೆಚ್ಚು ಪ್ರಮುಖವಾಗಿದೆಯೋ ಹೇಗೆ?

ಶ್ರೀ ಜೆ.ಹೆಚ್. ಪಟೇಲ್ : ಇದು ಕೈಗಾ ಅಣು ವಿದ್ಯುತ್ ಕೇಂದ್ರದ ಸಮಸ್ಯೆ ಬೇರೆ, ಈಗ 400 ಕೆ.ವಿ. ಲೈನ್ ಎಳೆಯುತ್ತಿರುವುದು ಅಣು ವಿದ್ಯುತ್ ಕೇಂದ್ರದಿಂದ ಆಗುವುದು ಅಷ್ಟೆ ಅಲ್ಲ, ಕದ್ರ ಕೊಡಸಳ್ಳಿ ವಿದ್ಯುತ್ ಜಲಾಶಯಗಳಿಂದ ಬಂದ ವಿದ್ಯುತ್‌ನ್ನು ಟ್ರಾನ್ಸ್‌ಮಿಟ್ ಮಾಡುವುದಕ್ಕೆ ಈ ಲೈನ್ ಅವಶ್ಯವಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಕೈ ಬಿಡುವ ಪ್ರಶ್ನೆಯೇ ಇಲ್ಲ. ಕೈಗಾ ಅಣು ವಿದ್ಯುತ್ ಕೇಂದ್ರವನ್ನು ಕೈಬಿಡುವ ಪ್ರಶ್ನೆಯೇ ಇಲ್ಲ. ಗುಮ್ಮಟ ಬಿದ್ದಿತ್ತು ನಾನೂ ಸಹ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ಗುಮ್ಮಟ ಏಕೆ ಬಿತ್ತು ಈ ಗುಮ್ಮಟ ಬಿದ್ದಿದ್ದರಿಂದ ಅಕಸ್ಮಾತ್ ಇಂಥದ್ದೇ ಒಂದು ದುರ್ಘಟನೆಯೇನಾದರೂ ಆದರೆ ನ್ಯೂಕ್ಲಿಯರ್ ರಿಯಾಕ್ಟನ್ ಏನಾದರೂ ಆಗುತ್ತದೆಯೇ ಎನ್ನುವುದರ ಬಗ್ಗೆ ವೈಜ್ಞಾನಿಕವಾಗಿ ನೋಡುತ್ತಿದ್ದಾರೆಯೇ ವಿನಹ ಈಗ ಬಿದ್ದ ಗುಮ್ಮಟಕ್ಕೆ ರೀಪ್ಲೇಸ್‌ಮೆಂಟ್‌ಗೆ ಏನು ಮಾಡಬೇಕು ಆ ಕೆಲಸ ನಡೆಯುತ್ತಿದೆ. ನಿಜವಾಗಿಯೂ ಅಣುಸ್ಥಾವರದಲ್ಲಿ ಕೆಲಸ ನಡೆಯುತ್ತಿದೆ, ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ನಾನು ಸ್ಥಳಕ್ಕೆ ಹೋಗಿ ಅಲ್ಲಿಯ ಶಾಸಕರುಗಳನ್ನು ಕಂಡು ಮಾತನಾಡಿ ಬಂದಿದ್ದೇನೆ. ಇನ್ನು ಮೇಲೆ ಲೈನ್ ಎಳೆಯುವುದನ್ನು ತಡಮಾಡಿದರೆ ನಮ್ಮ ರಾಜ್ಯಕ್ಕೂ ಹಾನಿ ಹಾಗಾದರೆ ವಿದ್ಯುತ್ ಯೋಜನೆಗಳನ್ನು ಕೈ ಬಿಟ್ಟುಬಿಡುವುದೆ? ಕಾಡು ಹೋಗುತ್ತದೆ ನಿಜ. ಮತ್ತೆ ವಿದ್ಯುತ್ ಲೈನನ್ನು ಎಳೆಯಬೇಕಾದರೆ ಅನಿವಾರ್ಯವಾಗಿ ಕಾಡು ಸ್ವಲ್ಪ ದೂರ ಹೋಗಬೇಕಾಗುತ್ತದೆ, ಕಡಿಯಲೇ ಬೇಕಾಗುತ್ತದೆ. ಇದು ಅನಿವಾರ್ಯ ಮತ್ತು ರಾಜ್ಯದ ಹಿತದೃಷ್ಟಿಯಿಂದ -ಅವಶ್ಯಕವಾಗಿ ಮಾಡಬೇಕಾದಂತಹ ಕೆಲಸ.

ಡಾ॥ ಯು. ಚಿತ್ತರಂಜನ್ : ಮಾನ್ಯ ಉಪ ಮುಖ್ಯ ಮಂತ್ರಿಗಳ ವಿಚಾರವನ್ನು ನಾನು ಒಪ್ಪುವುದಿಲ್ಲ, ಏಕೆಂದರೆ ಇದು ಚಿತ್ತರಂಜನ್ ಒಪ್ಪುವ ಪ್ರಶ್ನೆ ಅಲ್ಲ, ಟ್ರಾನ್ಸ್‌ಮಿಷನ್ ಲಾಸ್ 22 ಪರ್ಸೆಂಟಿಗೂ ಜಾಸ್ತಿ ಇದೆ. ಹಳೆಯ ಲೈನ್‌ಗಳು ಇರುವುದರಿಂದ ಲಾಸ್ ಆಗುತ್ತಿದೆ. ಉದಾಹರಣೆಗೆ ಗೇರು ಸೊಪ್ಪದಿಂದ ಮಂಗಳೂರು ಕಡೆ ಹೋಗತಕ್ಕ ಲೈನನ್ನು 1956ರಲ್ಲಿ ಹಾಕಲಾಗಿದೆ. ಈಗ 8 ವರ್ಷಗಳ ಹಿಂದೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟ ಸಿರಸಿಯಿಂದ ಕುಮುಟ, ಭಟ್ಕಳ ಉಡುಪಿ, ಮಂಗಳೂರುವರೆಗಿನ 110ಕೆ.ವಿ. ಲೈನ್ ಏನಿದೆ ಇಂಥದ್ದನ್ನು ಸರ್ಕಾರಕ್ಕೆ ಮಾಡುವುದಕ್ಕಾಗುತ್ತಿಲ್ಲ. ಈಗ ರಾಯಚೂರುನಿಂದ ಬೆಂಗಳೂರಿಗೆ ವಿದ್ಯುಚ್ಛಕ್ತಿ ಬರಬೇಕು ಶರಾವತಿಯಿಂದ ಬೆಂಗಳೂರಿಗೆ ವಿದ್ಯುಚ್ಛಕ್ತಿ ಬರಬೇಕು. ಒಟ್ಟಾರೆ ನಾನು ಹೇಳುವುದೇನೆಂದರೆ, There is no master plan for proper transmission of electric energy. This is one of the basic things about which I would like to draw the attention of the Minister. Unless there is a master-plan for the transmission, whether it is the Central

Government or whather it is the power Grid Corporation of India,

ಅವರಿಗೆ ರಾಜ್ಯ ಸರ್ಕಾರದಿಂದ ಸರಿಯಾಗಿ ಅಡ್ವೈಸ್ ಮಾಡಬೇಕು. ರಾಜ್ಯದಲ್ಲಿ ವಿದ್ಯುಚ್ಛಕ್ತಿ ಟ್ರಾನ್ಸ್‌ಮಿಷನ್ ಬಗ್ಗೆ ಮಾಸ್ಟರ್ ಪ್ಲಾನ್ ನಾವು ತಯಾರಿಸುತ್ತೇವೆ, ಆ ಮಾಸ್ಟರ್ ಪ್ಲಾನ್ ತಯಾರಾದ ಮೇಲೆ ನೀವು ಅದನ್ನು ಹಾಕಿ. ಈಗ ಕೈಗಾ ಬಗ್ಗೆ ವಿವಾದ ಇದೆ, ಇರಲಿ. ಆ ಪ್ರಶ್ನೆ ಅಲ್ಲ. ಈಗಿರತಕ್ಕ ಪ್ರಶ್ನೆ ಏನೆಂದರೆ, ಟ್ರಾನ್ಸ್‌ಮಿಷನ್ ಲೈನ್ ಹಾಕುವುದನ್ನು ತಕ್ಷಣ ನಿಲ್ಲಿಸಬೇಕು. ಅಕಸ್ಮಾತ್ ನಿಲ್ಲಿಸದಿದ್ದರೆ ಉತ್ತರ ಕನ್ನಡ ಜಿಲ್ಲೆಯ ಜನರಿಗೆ ಚಳುವಳಿ ಮಾಡದೆ ಬೇರೆ ಮಾರ್ಗವಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಟ್ರಾನ್ಸ್‌ಮಿಷನ್ ಲಾಸ್ ಕಂಟ್ರೋಲ್ ಮಾಡುವುದಕ್ಕೂ ಸರ್ಕಾರ ಏನು ಮಾಡುತ್ತಿದೆ ಎಂಬುದಕ್ಕೂ ಅರ್ಥಾತ್ ಸಂಬಂಧವಿಲ್ಲ. ನಾಳೆ ಬೇಡಿಕೆ ಮೇಲೆ ಉತ್ತರ ಕೊಡುವಾಗ ಟ್ರಾನ್‌ಮಿಷನ್ ಲಾಸ್ ಎಷ್ಟಿದೆ, ನಮಗೆ ರಾಯಚೂರಿನಿಂದ ಬೆಂಗಳೂರಿಗೆ ಬರುತ್ತಿರುವ ಲೈನ್ ಯಾವುದು, ಶರಾವತಿಯಿಂದ ಹೇಗೆ ನಾವು ಟ್ರಾನ್ಸ್‌ಮಿಷನ್ ಮಾಡುತ್ತಿದ್ದೇವೆ. ಎಂಬುದನ್ನೆಲ್ಲ ವಿವರವಾಗಿ ಹೇಳಬಹುದು. ಟ್ರಾನ್ಸ್‌ಮಿಷನ್ ಲಾಸ್‌ನಲ್ಲಿ ಪವರ್ ತೆಫ್ಟ್ ಸೇರುತ್ತದೆ, ಆ ವಿಷಯ ಬೇರೆ. ಆ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ಇಷ್ಟೇ ಹೇಳುವುದು, 400 ಕೆ.ವಿ. ಲೈನ್ ಈಗ ಎಳೆಯುತ್ತಿರುವುದು ಬಹಳ ಅವಶ್ಯಕವಾದುದು. ಮುಂದೆ ಯಾವುದೇ ಲೈನ್‌ನಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಆಗದ ಹಾಗೆ ಏನು ಮಾಡುತ್ತೇವೆ ಪವರ್ ಗ್ರಿಡ್ ಕಾರ್ಪೋರೇಷನ್‌ನವರು ಏನು ಹೇಳಿದ್ದಾರೆ. ಇಂಟರ್ ನ್ಯಾಷನಲ್ ಟೆಕ್ನಾಲಜಿ ಅದು ಬೇರೆ ವಿಷಯ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಡಾ॥ ಯು. ಚಿತ್ತರಂಜನ್ : ಅರಣ್ಯವನ್ನು ಕಡಿಯಬಾರದೆಂದು ಪರಿಸರದವರೆಲ್ಲರೂ ಹೇಳಿದ್ದಾರಲ್ಲ, ಆದರೂ ಕೂಡ ಸರ್ಕಾರ ಏಕೆ ಹೀಗೆ ಹಠ ಹಿಡಿಯುತ್ತದೆಂದು ನಮಗೆ ಅರ್ಥವಾಗುತ್ತಿಲ್ಲ. ಉತ್ತರ ಕನ್ನಡ ಜಿಲ್ಲೆಯಿಂದ ನಾವು ಎಷ್ಟೆಲ್ಲ ತ್ಯಾಗ ಮಾಡಿದ್ದೇವೆ, ಇವತ್ತು ಒಟ್ಟು ಪವರ್‌ನಲ್ಲಿ 910 ಮೆಗಾವ್ಯಾಟ್ ನಮ್ಮ ಜಿಲ್ಲೆಯಿಂದಲೇ ಬರುತ್ತಿದೆ. ಇನ್ನೂ ಕೂಡ ನಾವು ಕೊಡುತ್ತಿದ್ದೇವೆ. ಆದರೂ ನಮ್ಮ ಜಿಲ್ಲೆಯ ಮೇಲೆ ಏತಕ್ಕೆ ಗದಾಪ್ರಹಾರ ಮಾಡುತ್ತಿದ್ದೀರಿ?

ಶ್ರೀ ಜೆ.ಹೆಚ್. ಪಟೇಲ್ : ಆಯಾಯ ಜಿಲ್ಲೆಯ ವಿಚಾರ ಹೇಗೆ ಆಯಿತೆಂದರೆ ನಾನು ಶರಾವತಿ ಜಿಲ್ಲೆಯವನು. ಶರಾವತಿಯವರಿಗೆ ನಮಗೆ ಒಂದೊಂದು ಸಾರಿ ಪವರ್ ಕೊರತೆ ಆಗಬಹುದು. ನಮ್ಮ ಜಿಲ್ಲೆಯಲ್ಲಿ ಜನರೇಟ್ ಆದ ಪವರ್ ನಮಗೆ. ಹಾಗಾದರೆ ಕೋಲಾರದವರು ಕೇಳಬಹುದು, ನಮ್ಮ ಜಿಲ್ಲೆಯಲ್ಲಿರುವ ಬಂಗಾರವನ್ನು ನಮಗೆ ಕೊಡಿ, ಬೇರೆಯವರಿಗೆ ಏತಕ್ಕೆ ಕೊಡಬೇಕು ಎಂದು.

ಡಾ॥ ಯು. ಚಿತ್ತರಂಜನ್ : ಟ್ರಾನ್ಸ್‌ಮಿಷನ್ ಲೈನ್ ಬಗ್ಗೆ ಸೈಂಟಿಫಿಕ್ ಆಗಿ ನಾನು ಇದನ್ನು ಪ್ರಶ್ನೆ ಮಾಡುತ್ತಿದ್ದೇನೆ. ದಯವಿಟ್ಟು ಇದರ ಬಗ್ಗೆ ತಜ್ಞರ ವರದಿ ಬರುವವರೆಗಾದರೂ ನಿಲ್ಲಿಸಬೇಕು.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಮಂತ್ರಿಗಳು ಉತ್ತರದಲ್ಲಿ ಈಗಲ್ಲದಿದ್ದರೂ ಮುಂದೆಯಾದರೂ ಕೈಗಾ ಅಣು ವಿದ್ಯುತ್ ಸ್ಥಾವರದಿಂದ ಉತ್ಪಾದನೆಯಾದ ವಿದ್ಯುತ್ತನ್ನು ಪ್ರಸರಣೆ ಮಾಡಲು ಕೈಗಾ - ಶಿರಸಿ 400 ಕೆವಿ ವಿದ್ಯುತ್ ಲೈನಿನ ಅಗತ್ಯವಿದೆ ಎಂದು ಹೇಳಿದ್ದಾರೆ ಈಗಲ್ಲವಾದರೂ ಮುಂದೆ ಯಾದರೂ ಅಂದರೆ is he putting the cart before horse?

ಎರಡನೆಯದಾಗಿ, ಮರ ಕಡಿಯದೆ, ಅರಣ್ಯ ಕಡಿಯದೆ ಬೇರೆ ರೀತಿಯಿಂದ ಟ್ರಾನ್ಸ್‌ಮಿಷನ್ ಲೈನ್ ತೆಗೆದುಕೊಂಡು ಹೋಗುವುದಕ್ಕ ಸಾಧ್ಯವಿದೆ. ಉದಾಹರಣೆಗಾಗಿ ಕೈಗಾ, ನಾಗಝರಿ ಹುಬ್ಬಳ್ಳಿ, ದಾವಣಗೆರೆ, ಬೆಂಗಳೂರು, ಕೈಗಾ, ಕಾರವಾರ, ಕುಮುಟ, ಹೊನ್ನಾವರ, ಗೇರುಸೊಪ್ಪ, ಶಿವಮೊಗ್ಗ, ಬೆಂಗಳೂರು, ಕೈಗಾ, ಕಾರವಾರ, ಕುಮುಟ, ಕುಂದಾಪುರ, ಮಂಗಳೂರು- ಹೀಗೆ ಇರತಕ್ಕ ಲೈನುಗಳು ಇವೆ. ಆ ಲೈನ್ ತೆಗೆದು ಈ ಲೈನ್ ಹಾಕಿದರೆ ಅರಣ್ಯ ಕಡಿಯತಕ್ಕ ಅಗತ್ಯ ಇರುವುದಿಲ್ಲ. ಆದರ ಬಗ್ಗೆ ತಾವು ಏತಕ್ಕೆ ಯೋಚನೆ ಮಾಡುವುದಿಲ್ಲ. ಎರಡನೆಯದಾಗಿ ಇನ್ನೂ ವಿದ್ಯುತ್ ಉತ್ಪಾದನೆಯಾಗಲಿಲ್ಲ. ವಿದ್ಯುತ್ ಉತ್ಪಾದನೆಗೆ ಇನ್ನೂ 2-3 ವರ್ಷ ಬೇಕು. ಈಗಲೇ ಏತಕ್ಕೆ ಮರ ಕಡಿಯುವ ಕೆಲಸ ಮಾಡುತ್ತೀರಿ? are you interested more in cutting forests rather than putting the lines? ಅದು ಪ್ರಶ್ನೆ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ 3ವರ್ಷ ಬೇಕು, ಮತ್ತೆ ಲೈನ್ ಹಾಕುವುದಕ್ಕೆ 3ವರ್ಷ ಬೇಕಾಗುತ್ತದೆಯೋ ಏತಕ್ಕೆ ಅರಣ್ಯ ಕಡಿಯುವುದಕ್ಕೆ ಅಷ್ಟು ಉತ್ಸುಕರಾಗಿದ್ದೀರಿ?

ಶ್ರೀ ಜೆ.ಹೆಚ್. ಪಟೇಲ್ : ಹಿಂದೆ ಈ ರೀತಿ ಯೋಜನೆ ಮಾಡದೆ ನಾವು ಪವರ್ ಜನರೇಷನನ್ನು ಪವರ್ ಜನರೇಟಿಂಗ್ ಸ್ಟೇಷನ್ನನ್ನೂ ಕ್ರಿಯೇಟ್ ಮಾಡಿ ಅಲ್ಲಿಂದ ಜನರೇಟ್ ಆದ ಪವರನ್ನು ನಾವು ಟ್ರಾನ್ಸ್‌ಮಿಟ್ ಮಾಡದೆ ಎವ್ಯಾಕ್ಯುಯೇಟ್ ಮಾಡುವುದಕ್ಕಾಗದೆ ರಾಯಚೂರಿನ 4ನೇ ಯೂನಿಟ್‌ನಲ್ಲಿ ನಾವು ಕಷ್ಟ ಅನುಭವಿಸಿದ್ದೇವೆ. ಅದು ಈಗ ಸರಿಹೋಗಿದೆ. ಆದೇ ರೀತಿ ನಮಗೆ ಇನ್ನೂ ಎರಡು ವರ್ಷ ಅಂದರೆ 1997ರ ಡಿಸೆಂಬರ್ ಹೊತ್ತಿಗೆ ಪವರ್ ಜನರೇಟ್ ಆಗುತ್ತದೆ, ಕೈಗಾ ಒಂದು ಯೂನಿಟ್ ಪ್ರಾರಂಭವಾಗುತ್ತದೆಂದರೆ ನಾವು ಈಗಿನಿಂದ ಟ್ರಾನ್ಸ್‌ಮಿಷನ್ ಲೈನ್ ತಯಾರು ಮಾಡಬೇಕೆಂದರೆ ನಮಗೆ ಅನುಕೂಲವಾಗುತ್ತದೆ. ಅಲ್ಲಿ ಜನರೇಟಿಂಗ್ ಸ್ಟೇಷನ್ ಶುರುವಾದ ಮೇಲೆ ನಾವು ಲೈನ್ ಎಳೆಯುವುದಲ್ಲ. ಮಾನ್ಯ ಸದಸ್ಯರು ಕಾಡು ಕಡಿಯದೆ ಪವರ್ ಟ್ರಾನ್ಸ್‌ಮಿಟ್ ಮಾಡಿ ಎಂದು ಹೇಳಿದರು. ಕಾಡು ಕಡಿಯದೆ ಹಾಗೇ ನಾವು ಟ್ರಾನ್ಸ್‌ಮಿಟ್ ಮಾಡುವುದು ಸಾಧ್ಯ ಇದೆ, ಇಲ್ಲವೆಂದು ಅಲ್ಲ. ಅದಕ್ಕೆ ಹಾಕುವ ಬಂಡವಾಳ ಇದರ 20ರಷ್ಟು ಬೇಕಾಗುತ್ತದೆ. ಆ ಬಂಡವಾಳ ನಮ್ಮಲ್ಲಿ ಇಲ್ಲದಿರುವುದರಿಂದ ನಮ್ಮ ದೇಶದಲ್ಲಿ ಅಂಡರ್‌ಗ್ರೌಂಡ್ ಕೇಬಲ್ ಸಿಸ್ಟಂ ಅನ್ನು ನಾವು ಏಕೆ ತಂದಿಲ್ಲವೆಂದರೆ ಅದು ತುಂಬಾ ದುಬಾರಿ.

ಡಾ|| ಎಂ.ಪಿ. ಕರ್ಕಿ : ಈಗ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ. ಉತ್ತರ ಕನ್ನಡ ಜಿಲ್ಲೆ ಅರಣ್ಯ ಜಿಲ್ಲೆ. ಅರಣ್ಯ ದಟ್ಟವಾಗಿರತಕ್ಕದ್ದು ಉತ್ತರ ಕನ್ನಡ ಜಿಲ್ಲೆಯಷ್ಟು ಬೇರೆ ಎಲ್ಲಿಯೂ ಇಲ್ಲ. ಅಂಥ ಸೇಷನ್ ಫಾರೆಸ್ಟ್ ಕಡಿದರೆ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ನಾಶವಾಗುತ್ತದೆ. ಹೀಗೆ ಕಡಿಯುವುದರಿಂದ ತಿರುಗಿ ಅರಣ್ಯ ಪ್ರದೇಶವನ್ನು ಮಾಡುವುದಕ್ಕೆ ಬರುವುದಿಲ್ಲ. ಅದು ಎಲ್ಲಿದೆಯೋ ಅಲ್ಲಿ ಇರಬೇಕಾಗುತ್ತದೆ. ಒರಿಜಿನಲ್ ಫಾರೆಸ್ಟ್ ಕಡಿದು ಮತ್ತೆ ಒರಿಜಿನಲ ಫಾರೆಸ್ಟ್ ಮಾಡುವುದಕ್ಕೆ ಬರುವುದಿಲ್ಲ. ಮಾಡಿದರೂ ಅದು ಬರೀ ಆರ್ಟಿಫಿಷಿಯಲ್ ಫಾರೆಸ್ಟ್ ಆಗುತ್ತದೆ. ಅದಕ್ಕೆ ಬೇರೆ ಮಾರ್ಗ ಇದೆ. ಅದು ಯಾವುದೆಂದು ನಾವು ಸೂಚನೆ ಕೊಡುತ್ತಿದ್ದೇವೆ.

(ಗೊಂದಲ)

(ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ.

ಡಾ|| ಎಂ.ಪಿ. ಕರ್ಕಿ : ಈಗ ಕೈಗಾ ನಾಗಝರಿ ಹುಬ್ಬಳ್ಳಿ, ದಾವಣಗೆರೆ, ಬೆಂಗಳೂರು ಲೈನ್ ಇದೆ. ಅಲ್ಲಿ ಮರ ಕಡಿಯತಕ್ಕ ಅಗತ್ಯವಿಲ್ಲ. ಆದೇ ರೀತಿ

ಕೈಗಾ, ಕಾರವಾರ ಕುಮುಟಾ, ಹೊನ್ನಾರ, ಗೇರುಸೊಪ್ಪ, ಶಿವಮೊಗ್ಗ, ಬೆಂಗಳೂರು ಅಲ್ಲಿ ಕೂಡ ಎಲೆಕ್ಟ್ರಿಸಿಟಿ ಲೈನ್ ಹೋಗುತ್ತದೆ. ಅಲ್ಲಿ ಕೂಡ ಮರ ಕಡಿಯತಕ್ಕ ಅಗತ್ಯ ಇಲ್ಲ.

ಒಬ್ಬ ಮಾನ್ಯ ಸದಸ್ಯರು : ಇದು ಗಮನ ಸೆಳೆಯುವ ಸೂಚನೆ. ಇದು ಚರ್ಚೆಗೆ ಹೋಗುತ್ತಿದೆ.

(ಗೊಂದಲ)

ಉಪಾಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ, ನೀವು ಹೇಳಿದ ಪ್ರಶ್ನೆಯನ್ನೇ ಕೇಳುತ್ತಿದ್ದೀರಿ, ಅದು ಕೇಳತಕ್ಕದ್ದಲ್ಲ. ಇದರ ಬಗ್ಗೆ ಡಿಮ್ಯಾಂಡ್ ಬಂದಾಗ ನೀವು ಮಾತನಾಡಿ. ಈಗ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

ಡಾ॥ ಎಂ.ಪಿ. ಕರ್ಕಿ : ಕಾಸ್ಟ್ ಜಾಸ್ತಿ ಆಗುತ್ತದೆಂದು ಹೇಳಿದರು. ಅದಕ್ಕೆ ಮರ ಕಡಿಯುವುದು ಸರಿಯೆ?

ಉಪಾಧ್ಯಕ್ಷರು : ಪುನಃ ಚರ್ಚೆ ಮಾಡುತ್ತೀರಲ್ಲ? ಇದನ್ನು ಚರ್ಚೆಗೆ ತೆಗೆದು ಕೊಳ್ಳುವುದಕ್ಕಾಗುತ್ತದೆಯೆ? ನೀವು ಡಿಮ್ಯಾಂಡ್ ಮೇಲೆ ಮಾತನಾಡಿ.

ಡಾ॥ ಎಂ.ಪಿ. ಕರ್ಕಿ : ಅದಕ್ಕೆ ಸಮಯ ಇಲ್ಲ. ಈಗ ಮರ ಕಡಿಯುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ದೇಶಪಾಂಡೆಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಅವರು ಸ್ವತಃ ಈ ಸದನದಲ್ಲಿ ಹೇಳಿರುವುದು ಇದೆ. ತಜ್ಞರ ವರದಿ ಬರುವವರೆಗೆ ಯಾವುದೇ ರೀತಿಯ ಕೆಲಸ ಮುಂದುವರಿಸಬಾರದು ಎಂದು. ಅದು ಆಡಳಿತ ಪಕ್ಷಕ್ಕೆ ಹೋದ ತಕ್ಷಣ ಈ ನಿಲುವು ಬದಲಾಗುತ್ತದೆಯೇ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಆಲ್ಟರ್ನೇಟೀವ್ ಸಲಹೆ ಕೊಡುತ್ತಿದ್ದಾರೆ. ಗಿಡ ಕಡಿಯದೆ ಯಾವ ರೀತಿ ಲೈನ್ ಒಯ್ಯಬಹುದು ಎಂದು ಸಲಹೆ ಕೊಡುತ್ತಿದ್ದಾರೆ. ಅದು ಹೇಗೆ ಸಾಧ್ಯ ಎಂದು ಅವರು ಹೇಳಿದರು.

ಶ್ರೀ ಜೆ.ಹೆಚ್. ಪಟೀಲ್ : ಎಷ್ಟೋ ಸಾರಿ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದ್ದೇನೆಂದರೆ, ಅಂಡರ್‌ಗ್ರೌಂಡ್ ಕೇಬಲ್ ಎಳೆದರೆ ಕಾಸ್ಟ್‌ಲಿ ಆಗುತ್ತದೆ, ಆದರೆ ಅದು ಸಾಧ್ಯವಿಲ್ಲ. ನಾವು ಮಾಡುವುದು ಹೀಗೇ ಎಂದು ತಾವು ಹೇಳಿದಿರಿ. ಅದಕ್ಕೆ ಅವರು ಏನು ಹೇಳುತ್ತಾರೆಂದರೆ, ಅದು ಸಾಧ್ಯ ಇದೆ 'there is some alternative we will suggest' ಎಂದು ಹೇಳುತ್ತಾರೆ.

ಶ್ರೀ ಜೆ.ಹೆಚ್. ಪಟೀಲ್ : ಅದು ಈ ಕೆಪಾಸಿಟಿ ಲೈನ್ ಅಲ್ಲ. ಮಾನ್ಯ ಸದಸ್ಯರು ಏನು ಹೇಳುತ್ತಾರೆ, ದಾವಣಗೆರೆ ಮೇಲೆ ಆಸಿ ಹಾಗೆ, ಹೀಗೆ ತರಬಹುದಲ್ಲ ಎಂದು. This is 400 KV line exclusively meant for this Kaiga Atomic Energy. ಈಗ 400 ಕೆವಿ ಲೈನ್ ರಾಯಚೂರಿನಿಂದ ಬರುವವರೆಗೆ ನಮಗೆ ಎಷ್ಟು ತೊಂದರೆಯಾಯಿತು ತಜ್ಞರನ್ನು ನೋಡಿ ನಾನು ಸ್ಥಳಕ್ಕೆ ಹೋಗಿಬಂದಿದ್ದೇನೆ. ಚರ್ಚೆ ಬೇಕಾದರೆ ಆಮೇಲೆ ಮಾಡೋಣ. ಆಟೋಮಿಕ್ ಎನರ್ಜಿ ಬೇಕೇ ಬೇಡವೇ ನಮಗೆ

ಎಲೆಕ್ಟ್ರಿಸಿಟಿ ಬೇಕೇ ಬೇಡವೆ ಎಂಬ ಬಗ್ಗೆ ಬೇಕಾದರೆ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಚರ್ಚೆ ಮಾಡೋಣ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಪರಿಸರವಾದಿಗಳು ತಜ್ಞರು, ಟೆಕ್ನೀಶಿಯನ್ಸ್ ಸೈಂಟಿಸ್ಟ್ಸ್.....

ಉಪಾಧ್ಯಕ್ಷರು : ಡಿಮ್ಯಾಂಡ್ಸ್ ಬಂದಾಗ ಡೀಟೈಲ್ ಆಗಿ ಚರ್ಚೆ ಮಾಡಿ. ಬಸನಗೌಡರೆ ಕೇಳಿ.

ಒಬ್ಬ ಮಾನ್ಯ ಸದ್ಯಸರು : ದಯವಿಟ್ಟು ಬೇರೆ ನೋಟೀಸ್ ಕೊಟ್ಟ ಚರ್ಚೆ ಮಾಡುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಆಡಳಿತ ಪಕ್ಷದಲ್ಲಿ ಇರುವವರು ಶ್ರೀ ದೇಶಪಾಂಡೆಯವರು ತಜ್ಞರ ವರದಿ ಬರಲಿ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು : ಗಮನ ಸೆಳೆಯುವ ಸೂಚನೆಗೆ ಕೊಟ್ಟಂತ ಉತ್ತರ ಈಗ ಮುಕ್ತಾಯವಾಯಿತು, ಮತ್ತೆ ಆದರ ಬಗ್ಗೆ ಪ್ರಸ್ತಾಪ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಬಹಳ ಪ್ರಮುಖವಾದ ವಿಷಯ. ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ. ಅವರು ನಿಶ್ಚಿತವಾಗಿ ಮರ ಕಡಿಯತಕ್ಕದ್ದು.

ಉಪಾಧ್ಯಕ್ಷರು : ನೀವು ಈಗ ಬಂದಿರಿ, ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ ಸಾಕಷ್ಟು ಅವಕಾಶ ಮಾಡಿಕೊಟ್ಟಿದೆ, ಅವಕಾಶ ಮಾಡಿಕೊಡಲಿಲ್ಲವೆಂದು ಅಲ್ಲ. ಈಗಾಗಲೇ ಅವರು ಕೇಳಿದಂಥ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಚರ್ಚೆ ಬೇಡ, ಡಿಮ್ಯಾಂಡ್ಸ್ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮರ ಏತಕ್ಕೆ ಕಡಿಯಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಇದರಲ್ಲಿ ನುರಿತಂಥವರು, ಗೊತ್ತಿರುವವರು. ನಾನು ಈಗ ಬಂದೆ ನಿಜ. ಸಮಸ್ಯೆ ಗೊತ್ತು ನನಗೆ. ಆಲ್ಟರ್ನೇಟೀವ್ ಲೈನ್ ಮಾಡುವಂಥ ವ್ಯವಸ್ಥೆ ಇದೆ, ಮರ ಕಡಿಯುವುದನ್ನು ತಡೆಯಿರಿ ಎಂದಾಗ, ಕಾಲಿಂಗ್ ಅಟೆನ್‌ಷ್‌ನ್ ಕೊಟ್ಟಾಗ ಉತ್ತರ ಕೊಡುವುದು ಬೇಡವೆ? ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡಬೇಕು ಎಂದರೆ ಹೇಗೆ?

ಉಪಾಧ್ಯಕ್ಷರು : ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟು ಎಲ್ಲಾ ಆಗಿದೆ.

Sri J.H. Patel : 400 KV Line to evacuate power from KAIGA and also to use that line for Kadra Kodasalli. This is the higher capacity line ಈಗಿರತಕ್ಕದ್ದು 110 ಕೆ.ವಿ. ಲೈನ್ಸ್ ಇರಬಹುದು. ಇದು ಹೈಯರ್ ಕೆಪಾಸಿಟಿ ಲೈನ್ ಇಲ್ಲದಿದ್ದರೆ ರಾಯಚೂರು ನಾಲ್ಕನೇ ಯೂನಿಟ್‌ನಲ್ಲಿ ಬಂಗ ಹಾಗೆ ಕಷ್ಟ ಬರುತ್ತದೆ. ಅದಕ್ಕೋಸ್ಕರ ಈಗಲೇ ನಾವು ಅದನ್ನು ಮಾಡಿಕೊಳ್ಳಬೇಕು. ಅಕ್ಟೋಬರ್ 95ಕ್ಕೆ ನಾವು ಬರುತ್ತಿದ್ದೇವೆ. ಇನ್ನು ಒಂದು ವರ್ಷದೊಳಗೆ ಕೈಗಾದಲ್ಲಿ ಪವರ್ ಜನರೇಟ್ ಆದರೆ ಖಾಡ್ರಾ, ಕೊಡಸಳ್ಳಿ ಅವೂ 1997ಕ್ಕೆ ರೆಡಿಯಾಗುತ್ತವೆ. ಆದ್ದರಿಂದ ಕೈಗಾ, ಕಾಡ್ರಾ, ಕೊಡಸಳ್ಳಿಯಿಂದ ಪವರ್ ಇವ್ಯಾಕ್ಯುಯೇಟ್ ಮಾಡುವುದಕ್ಕೆ ಈ ಲೈನ್ ಅವಶ್ಯಕ. ಬೇರೆ ಲೈನನ್ನು ಟೆಕ್ನಿಕಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಇದನ್ನು ಹೇಳಿದರೂ ಕೂಡ ಪುನಃ ಪುನಃ ಅದನ್ನೇ ಹೇಳುತ್ತಿದ್ದಾರೆ. ಮರ ಕಡಿಯದೇ ಎಲೆಕ್ಟ್ರಿಕ್ ಲೈನ್ ತರುವುದಕ್ಕೆ

ಆಗುವುದಿಲ್ಲ. ಅದಕ್ಕೆ ನಾನು ಹೇಳುವುದು ಅಂಡರ್‌ಗ್ರೌಂಡ್ ಕೇಬಲ್ ಸಿಸ್ಟಂ ನಮ್ಮ ದೇಶದಲ್ಲಿ ಇಲ್ಲ, ಏಕೆಂದರೆ ಒಂದಕ್ಕೆ 30 ರಷ್ಟು 40 ರಷ್ಟು ಜಾಸ್ತಿಯಾಗುತ್ತದೆ. ಆದ್ದರಿಂದ ಅನಿವಾರ್ಯವಾಗಿ ಮರ ಕಡಿಯಬೇಕಾಗುತ್ತದೆ.

(ಹಲವಾರು ಸದಸ್ಯರು ಮಾತನಾಡಲು ಎದ್ದು ನಿಂತಿದ್ದರು)

ಉಪಾಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಬಸನಗೌಡರೇ ತಾವು ಕೇಳಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಪರ್ಯಾಯ ಬದಲಿ ಮಾರ್ಗಗಳಿವೆ. ಖಾದ್ರಾ ಕೊಡಸಳ್ಳಿ ಬಗ್ಗೆ ಬೇರೆ ಪ್ರತ್ಯೇಕ ಲೈನ್ ಬರುತ್ತಿದೆ. ಬೇರೆ ಮಾರ್ಗವಾಗಿ 400 ಕೆ.ವಿ. ವಿದ್ಯುತ್ ಲೈನನ್ನು ಹಾಕುವುದಕ್ಕೆ.....

ಉಪಾಧ್ಯಕ್ಷರು : ನೀವು ಹೇಳಿದಹಾಗೇ ಉತ್ತರ ಬರಬೇಕೇ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೆ, ಅಲ್ಲಿ ವಿದ್ಯುತ್ ಲೈನನ್ನು ಹಾಕುವುದಕ್ಕೆ ಅವಕಾಶ ಇದೆ.

ಉಪಾಧ್ಯಕ್ಷರು : ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಜನರಲ್ ಚರ್ಚೆಯಲ್ಲಿ ಇದನ್ನು ತನ್ನಿ. ಅದಕ್ಕೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಪರ್ಯಾಯ ಲೈನ್ ಬಗ್ಗೆ ಪರಿಶೀಲನೆ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುವುದು ಆ ತರಹ ಒಳ್ಳೆಯ ಸಲಹೆ ಕೊಟ್ಟಾಗ ಅದನ್ನು ಪರಿಶೀಲನೆ ಮಾಡಿ. ಚರ್ಚೆ ಆಮೇಲೆ ಮಾಡೋಣ. ಆಲ್ಟರ್ನೇಟೀವ್ ವ್ಯವಸ್ಥೆ ಇದ್ದಾಗ ಅದನ್ನು ಪರಿಶೀಲನೆ ಮಾಡುವುದಕ್ಕೆ ಏನು?

ಶ್ರೀ ಜೆ.ಹೆಚ್. ಪಟೇಲ್ : ಯಾವ ಯಾವ ಕಡೆಯಿಂದ ಲೈನ್ ತರಬಹುದು? ನಾವು ದೇಶದ ತುಂಬಾ ಹೋಗಿ ಇಲ್ಲಿಗೆ ಬರಬಹುದು. ಚರ್ಚೆ ಮಾಡುವಾಗ ಇಂಥಿಂಥ ಕಡೆಯಿಂದ ಎಂದು ಸಲಹೆ ಕೊಡಲಿ. Let it be technically sound. I am prepared to accept it. ಚರ್ಚೆ ಮಾಡುವಾಗ ಉತ್ತರ ಹೇಳುತ್ತೇನೆ. ಚರ್ಚೆ ಮಾಡುವಾಗ ಸಲಹೆ ಕೊಡಲಿ, ನಾನು ಉತ್ತರ ಹೇಳುತ್ತೇನೆ. If it is worth considering, I will do the needful.

ಶ್ರೀ ಕೆ.ಎಸ್. ಈಶ್ವರಪ್ಪ : ಆರ್.ವಿ. ದೇಶಪಾಂಡೆಯವರು ಇಲ್ಲಿದ್ದಾಗ ಇದನ್ನೇ ಮಾತು ಹೇಳಿದ್ದಾರೆ ಅವರು. ಅವರು ಹೇಳಿದ್ದನ್ನೇ ತಾವು ಈಗ ಹೇಳುತ್ತಿದ್ದೀರಿ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ.

ಡಾ॥ ಯು. ಚಿತ್ತರಂಜನ್ : ಮರ ಕಡಿಯುವುದನ್ನು ನಿಲ್ಲಿಸದಿದ್ದರೆ ಜನರೇ ಅದನ್ನು ತಡೆಯುವಂಥ ಕೆಲಸ ಮಾಡಬೇಕಾಗುತ್ತದೆ ಎಂದು ತಮ್ಮ ಗಮನವನ್ನು ಸೆಳೆಯುವುದನ್ನು ಇಷ್ಟಪಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ರಾಜ್ಯದಲ್ಲಿ ಒಂದು ಅನುಭವವಾಗಿದೆ. ರಾಮಗುಂಡಂ ಥರ್ಮಲ್ ಪ್ಲಾಂಟ್‌ಗೆ ನಾವು 250 ಕೆ.ವಿ. ಲೈನ್ ಎಳೆದುಕೊಳ್ಳದೆ ನಾಲ್ಕು ವರ್ಷ ತೊಂದರೆ ಪಟ್ಟಿದ್ದೇವೆ. ಆದ್ದರಿಂದ ಖಾದ್ರಾ, ಕೊಡಸಳ್ಳಿ ಮತ್ತೆ ಕೈಗಾ ಇದು ಸೆಂಟರ್ ಪ್ಲಾಂಟ್. ಇದಕ್ಕೆ ಟ್ರಾನ್ಸ್‌ಮಿಷನ್ ಲೈನ್ ಮೊದಲೇ ಮಾಡಿಕೊಳ್ಳಬೇಕು. ಕೆರೆ ಕಟ್ಟಿ ನಾಲೆ ತೋಡಿಕೊಳ್ಳದೇ ಹೋದರೆ ನಾಳೆ ತಾಪತ್ರಯ ಆಗುತ್ತದೆ. ಹಾಗೆ ಪ್ರಾಜೆಕ್ಟ್‌ನಲ್ಲಿ ಪವರ್ ಜನರೇಟ್ ಮಾಡಿ ಟ್ರಾನ್ಸ್‌ಮಿಷನ್ ಲೈನ್ ಈಗಲೇ ಹಾಕಿಕೊಳ್ಳದಿದ್ದರೆ ತೊಂದರೆಯಾಗುತ್ತದೆ. ಈಗಾಗಲೇ ಒಂದು ಅನುಭವ ಆಗಿದೆ. ಆಂಧ್ರದಿಂದ ಬರತಕ್ಕ ಪವರ್ ನಾಲ್ಕು ವರ್ಷ ಡಿಲೇ ಆಯಿತು 250

ಕೆ.ವಿ. ಲೈನ್ ಇಲ್ಲದೆ. ದಯವಿಟ್ಟು ಮಾನ್ಯ ಸ್ನೇಹಿತರು ಸಮಸ್ಯೆ ಅರ್ಥ ಮಾಡಿಕೊಳ್ಳಬೇಕು. ಇದು ರಾಜ್ಯದ ಭವಿಷ್ಯ. ಕೈಗಾ ಪ್ಲಾಂಟ್ ಸೆಂಟ್ರಲ್‌ಪ್ಲಾಂಟ್.ನಮಗೆ 10 ಪರ್ಸೆಂಟ್ ಶೇರ್ ಆಡ್ ಆಗುತ್ತದೆ, ಟ್ರಾನ್ಸ್‌ಮಿಷನ್ ಲೈನ್ ಈಗ ಹಾಕಿಕೊಳದೇ ಇದ್ದರೆ ನಾವು ಐದು ವರ್ಷ ಕಷ್ಟ ಪಡಬೇಕಾಗುತ್ತದೆ.

ಡಾ॥ ಯು. ಚಿತ್ತರಂಜನ್ : ನಾವು ಎಕ್ಸ್‌ಪರ್ಟ್ಸ್ ಅಭಿಪ್ರಾಯವನ್ನು ಒಪ್ಪುವುದಕ್ಕೆ ತಯಾರಿದ್ದೇವೆ. ಇದು ಚರ್ಚೆಯಾಗಲಿ. ಚರ್ಚೆಗೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಚರ್ಚೆ ಮಾಡಲಿಕ್ಕೆ ಬೇಡ ಎಂದು ಅಲ್ಲ. ಆದರೆ ಈಗ ಸಮಯ ಅಲ್ಲ. ಮೂರು ವರ್ಷ ಆಗತಕ್ಕದ್ದಕ್ಕೆ ಇವತ್ತು ಏತಕ್ಕೆ ಮಾಡುತ್ತೀರಿ ಎಂದು ಪ್ರಶ್ನೆ ಕೇಳುತ್ತಿದ್ದೀರಿ. ನಮ್ಮ ತುಂಗಭದ್ರಾದ ಅನುಭವ ಇದೆ. ಡ್ಯಾಮ್ ಕಟ್ಟಿದ ಮೇಲೆ ಕೆನಾಲ್ ತೋಡುವುದು ಅಲ್ಲ. ಡ್ಯಾಮ್ ಕಟ್ಟುವಾಗಲೇ ಕೆನಾಲ್ ಮಾಡುವುದರಿಂದ ಅದರ ಉಪಯುಕ್ತತೆ ಹೆಚ್ಚಾಗುತ್ತದೆಂಬುದು ಸರ್ಕಾರದ ಭಾವನೆ.

ಡಾ॥ ಯು. ಚಿತ್ತರಂಜನ್ : ಕೆನಾಲ್ ಹೀಗೇ ಹೋಗಬೇಕು ಎಂದು ಏನೂ ಇಲ್ಲ. ಕೆನಾಲ್ ಬೇರೆ ಮಾರ್ಗವಾಗಿ ತೆಗೆದುಕೊಂಡು ಹೋಗುವುದಕ್ಕೆ ಬರುತ್ತದೆ. ಇಷ್ಟೆಲ್ಲಾ ಹೇಳಿದರೂ ಕೂಡ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆ ಎಂಬ ಕನಿಷ್ಠ ಆಶ್ವಾಸನೆ ಕೂಡ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು : ಬಸನಗೌಡರೇ, ತಾವು ಕೇಳಿ.

(2) **ಬಿಜಾಪುರ ನಗರದಲ್ಲಿ ರಸ್ತೆಗಳು ಹಾಗೂ ಒಳಚರಂಡಿ ವ್ಯವಸ್ಥೆ ದುರಸ್ತಿ.**

ಶ್ರೀ ಬಸನಗೌಡ ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ನಗರದಲ್ಲಿ ಹದಗೆಟ್ಟಿರುವ ರಸ್ತೆಗಳು ಹಾಗೂ ಒಳಚರಂಡಿ ಅವ್ಯವಸ್ಥೆಯಿಂದಾಗಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ. ಬಿಜಾಪುರ ನಗರ ಸಭೆಯು ಕೆಲವೊಂದು ಪ್ರದೇಶಗಳಲ್ಲಿ ಮುಖ್ಯ ರಸ್ತೆಗಳ ರಿಪೇರಿ ಹಾಗೂ ಒಳಚರಂಡಿ ವ್ಯವಸ್ಥೆಯ ಕೆಲಸಗಳನ್ನು ಮಾಡಿಸುತ್ತಿದೆ. ಹಣಕಾಸಿನ ಅಭಾವದಿಂದ ನಗರದ ಎಲ್ಲಾ ಪ್ರದೇಶಗಳ ರಸ್ತೆ ರಿಪೇರಿ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗಿರುವುದಿಲ್ಲ. ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಬಿಜಾಪುರ ನಗರಸಭೆಯ ನಗರದ ಎಲ್ಲಾ ಪ್ರದೇಶಗಳಿಗೆ ರಸ್ತೆಗಳ ರಿಪೇರಿ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

ಶ್ರೀ ಬಸನಗೌಡ ಪಾಟೀಲ್ : ಉಪಾಧ್ಯಕ್ಷರೆ, ಬಿಜಾಪುರದ ಅನೇಕ ರಸ್ತೆಗಳು ಹಳ್ಳಿಯ ಪ್ರದೇಶಗಳಿಗಿಂತ ಕನಿಷ್ಠ ರಸ್ತೆಗಳಾಗಿ ಇವತ್ತು ಮಾರ್ಪಾಡಾಗಿವೆ. ಬಿಜಾಪುರದ ಜನತೆ ಈ ರಸ್ತೆಗಳಲ್ಲಿ ಸಾರ್ವಜನಿಕವಾಗಿ ವಾಹನಗಳನ್ನು ಓಡಾಡಿಸುವ ಪರಿಸ್ಥಿತಿಯಲ್ಲಿಲ್ಲ. ಅದೇ ರೀತಿ ಇನ್ನೊಂದು ಪ್ರಮುಖವಾದಂಥ ಒಂದು ಒಳಚರಂಡಿ ಯೋಜನೆಯನ್ನು 1972ರಲ್ಲಿ ನಗರಸಭೆಗೆ ವಹಿಸಿಕೊಟ್ಟರು. ಸನ್ಮಾನ್ಯ ಸಚಿವರು ಮೊನ್ನೆ ಕೊಟ್ಟಂಥ ಉತ್ತರದಲ್ಲಿ ನಗರಸಭೆಗೆ ವಹಿಸಿಕೊಡಲಾಗಿದ್ದನ್ನು ಹೇಳಿದ್ದಾರೆ. 1972ರ ನಂತರ ಬಿಜಾಪುರ ನಗರ ವಿಪರೀತವಾಗಿ ಬೆಳೆದಿದೆ. ಇವತ್ತು ಅನೇಕ ಹೊರಗಿನ ಪ್ರದೇಶಗಳಲ್ಲಿ ಬೆಳೆದಂಥ ಬಿಜಾಪುರ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲದೆ ಅಲ್ಲಿ ಸಾರ್ವಜನಿಕರು ತೀವ್ರವಾದ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅನೇಕ ಜನರು ಸೆಪ್ಟಿಕ್ ಟ್ಯಾಂಕ್‌ಗಳನ್ನು ಕಟ್ಟಿಕೊಂಡಿದ್ದರೂ ಆ ಸೆಪ್ಟಿಕ್ ಟ್ಯಾಂಕ್‌ಗಳಿಂದ ಮಲವನ್ನು ಹೊರಹಾಕುವ ಯಂತ್ರಗಳೂ ಸಹ ನಮ್ಮ ವಿಜಾಪುರ ನಗರಸಭೆಯಲ್ಲಿಲ್ಲ. ಹಣಕಾಸಿನ